ಕುಳಿತಿದ್ದೆ. ಆಗ ಮಣ್ಣಿನ ಬಣ್ಣದ ದೊಡ್ಡ ಷರ್ಟು ಮುಂತಾದವುಗಳನ್ನು ತೊಟ್ಟು ಒಬ್ಬಾತ ಅಲ್ಲಿಗೆ ಬಂದಿದ್ದ. ನಿಜವಾಗಿಯೂ ತಾನು ಹೆದರಿದ್ದೆ. ಆದರೆ, ಎದ್ದು ಹೋಗಲು ಸ್ವಲ್ಪ ತಡವಾಯಿತು. ಕಾರಣ, ಆತ ತನ್ನ ಮುಖವನ್ನೆ ದುರುಗುಟ್ಟಿ ನೋಡುತ್ತಾ ಕೇಳಿದ,

'ಅಧಿಕಾರಿಯ ಮನೆಗೆ ದಾರಿ ಯಾವುದು?'

ಎರಡು ಮೂರು ಸಲ ಕೇಳಿದಾಗ, ತನಗೆ ವಿಷಯದ ಅರಿವಾಯಿತು. ಆದರೆ, ಏನು ಮಾಡುವುದು, ತನಗೆ ಮಾತನಾಡಲು ಆಗುವುದಿಲ್ಲವಲ್ಲ. ಆದ್ದರಿಂದ ಏನೂ ಮಾತನಾಡಲಿಲ್ಲ. ಮಾತನಾಡಲು ಪ್ರಯತ್ನಿಸಲೂ ಇಲ್ಲ. ತಾನು ಮಾತನಾಡಲು ಪ್ರಯತ್ನಿಸುವಾಗಲೆಲ್ಲಾ ಎಲ್ಲರೂ ನಗುತ್ತಾರೆ. ಆದ್ದರಿಂದಲೇ ಅದನ್ನು ಕೇಳಿಸಿಕೊಳ್ಳಲಿಲ್ಲ ಎಂಬಂತೆ ನಟಿಸಿ ಮುಖ ತಿರುಗಿಸಿದ್ದ. ಆಗ ಸಿಕ್ಕಿತು ಪೆಟ್ಟುಗಳು. ಕೆನ್ನೆಗೆ ಎರಡು ಮೂರು. ತಾನು ಗಟ್ಟಿಯಾಗಿ ಅತ್ತಾಗ ಅವರು ನಿಲ್ಲಿಸಿದ್ದರು.

'ಅಧಿಕ ಪ್ರಸಂಗಿ' ಎಂದು ಅವರು ನನ್ನನ್ನು ಕರೆದಿದ್ದರು. ತನ್ನನ್ನು ಇನ್ನೊಮ್ಮೆ ಕೂಡ ಕೆಲವರು ಅಧಿಕಪ್ರಸಂಗಿ ಎಂದು ಕರೆದದ್ದುಂಟು. ಅಂದು ದೇವಸ್ಥಾನದ ಕಲ್ಯಾಣಿಯಲ್ಲಿ ಅವಳು ಸ್ನಾನಕ್ಕೆ ಹೋದಾಗ...

'ಮೂಗಾ, ಬೇಗ ಹೋಗಿ ಸ್ವಲ್ಪ ಚಹದ ಪುಡಿ ತೆಗೆದುಕೊಂಡು ಬಾ' ಅವಳು ಅದನ್ನು ಹೇಳುತ್ತಲೇ ಆತುರಾತುರವಾಗಿ ಓಡಿ ಬಂದಳು. ಅವಳ ಪುಟ್ಟ ದುಂಡನೆಯ ದೇಹದ ಮೇಲೆ ಒದ್ದೆ ಬಟ್ಟೆಗಳು ಅಂಟಿಕೊಂಡಿದ್ದವು. ಅವಳನ್ನೇ ನೋಡುತ್ತಾ ನಿಲ್ಲಬೇಕೆನಿಸಿದರೂ ಮೂಗ ಬೇಗ ಹೋಗಿ ಚಹದ ಪುಡಿಯ ಡಬ್ಬಿ ತೆಗೆದುಕೊಂಡು ನಡೆದ. ಹೊಸಿಲ ಬಳಿ ಬಂದಾಗ ರಾಜನ ಕತೆಯ ನೆನಪಾಯಿತು. ರಾಜ ಹೇಗೆ ಹೆಣ್ಣನ್ನು ಮಾತನಾಡಿಸಿದ್ದು ಎಂಬುದು ಮಾತ್ರ ನೆನಪಿಲ್ಲ. ಅದನ್ನು ಕೇಳಬಹುದಿತ್ತೇನೋ. ತಾನು ತಲೆಯ ಮೇಲೆ ಕೈಗಳನ್ನು ಇಟ್ಟ ಕೂಡಲೇ ಅವಳಿಗೆ ಅರ್ಥವಾಗುತ್ತದೆ, ರಾಜನ ಕತೆ ಹೇಳಬೇಕೆಂದು. ಅವಳಿಗೆ ತನ್ನ ಎಲ್ಲಾ ಮೋಹಗಳು ಎಷ್ಟು ಬೇಗನೆ ಅರ್ಥವಾಗುತ್ತವೆ! ಕೆಲವೊಮ್ಮೆ ಬಾಳೆಗಳಿಗೆ ನೀರು ಹಾಕಿದ ಮೇಲೆ ತುಂಬಾ ದಣಿವಾಗುತ್ತದೆ. ತಾನು ಅವರೆಕಾಳಿನ ಚಪ್ಪರದ ಕೆಳಗೆ ಕುಳಿತಾಗ ಅವಳು ಒಂದು ಲೋಟ ಚಹ ತಂದುಕೊಡುತ್ತಿದ್ದಳು. ದೊಡ್ಡಮ್ಮನಿಗೆ ಅಥವಾ ಶಂಕುಣ್ಣಿ ನಾಯರ್‌ಗೆ ಗೊತ್ತಾದರೆ ಅವಳ ಮೇಲೆ ದ್ವೇಷ ಕಾರುತ್ತಾರೆಂಬುದು ಅವನಿಗೆ ಗೊತ್ತಿದೆ. ತನಗೆ ದೊಡ್ಡಮ್ಮನನ್ನು ಶಂಕುಣ್ಣಿ ನಾಯರನ್ನೂ ಒಪ್ಪಲಾಗುವುದಿಲ್ಲ. ಆದರೆ, ಎಲ್ಲರೂ ತನಗೆ ಹೇಳುವುದುಂಟು.

'ನೀನು ತುಂಬಾ ಅದೃಷ್ಟವಂತ ಕಣಪ್ಪ. ಇಷ್ಟೊಂದು ಒಳ್ಳೆಯ ದೊಡ್ಡಮ್ಮ ದೊಡ್ಡಪ್ಪ ಸಿಕ್ಕಿದ್ರಲ್ಲ. ಹೆತ್ತ ಮಗನಂತೆ ನೋಡ್ಕೊಳ್ತಾ ಇದ್ದಾರೆ.'

ಅದು ನಿಜವೇ? ಗೊತ್ತಿಲ್ಲ. ಏಕೆಂದರೆ, ತನಗೆ ಅಮ್ಮ ಅಪ್ಪಂದಿರ ನೆನಪು ಕೊಂಚವೂ ಇಲ್ಲ. ಅವರು ಸತ್ತು ಹೋಗದೇ ಇದ್ದಿದ್ದರೆ ಈಗ ತನ್ನೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದರು? ಬಹುಶಃ ತುಂಬಾ ಹಾಸ್ಯ ಮಾಡುತ್ತಿದ್ದರೇನೋ. ದೊಡ್ಡಮ್ಮ ಗೇಲಿ ಮಾಡುತ್ತಿರಲಿಲ್ಲ. ಆದರೆ, ದಿನಾ ಹೀಗೆ ಹೇಳುತ್ತಿರುತ್ತಾರೆ.

'ದೇವರು ನನಗೆ ಮಗನನ್ನು ಕೊಡ್ಲಿಲ್ಲ. ಲಕ್ಷ್ಮಿ ಕುಟ್ಟಿಯ ಮಗ ಹೀಗೆ ಮಾತು ಬಾರದವನಂತಾಗಿದ್ದಾನೆ – ಹಸು ಕರುಗಳ ತರ.'

ಅನೇಕ ಸಲ ಇದನ್ನೆಲ್ಲಾ ಯೋಚಿಸುತ್ತಾ ಅಳುತ್ತಿರುತ್ತಾನೆ. ಒಮ್ಮೆ ತಾನು ಹೀಗೆ ಅಳುತ್ತಾ ಕುಳಿತಿದ್ದಾಗ ಅವಳು ಬಂದಳು. ತನ್ನನ್ನು ಸಮಾಧಾನಪಡಿಸಲು ಏನೇನೋ ಹೇಳಿದಳು. ಅದ್ಯಾವುದೂ ಈಗ ನೆನಪಿಲ್ಲ. ಆದರೆ, ಅವಳ ಮುಖ ಚೆನ್ನಾಗಿ ನೆನಪಿದೆ. ಕಾಡಿಗೆ ಹಚ್ಚಿದ ಅವಳ ಕಣ್ಣುಗಳು